# ನಿನ್ನನು ಪೂಜಿಸುವವನಮ್ಮ

*ರಾಗ: ವಾಚಸ್ಪತಿ ತಾಳ: ಆದಿ*

ಪಲ್ಲವಿ:

ನಿನ್ನನು ಪೂಜಿಸುವವನಮ್ಮಾ
ನೀನೇ ಆಗುವ ನಿಜಮಮ್ಮಾ

ಚರಣ:

ಎದೆಯಲಿ ಹುಣ್ಣಿಮೆ ಬೆಳಗುವುದು
ಮೋದವು ಖೇದವು ತೊಲಗುವುದು
ಚರಣವು ಸೋಕಿದ ಎಲ್ಲೆಡೆಯೂ
ಅಂಬುಧಿ ಕನ್ಯೆಯು ನೆಲೆಸುವಳು ...1

ಕರುಣೆಯು ಮನದಲಿ ಜಿನುಗುವುದು
ಕಣ್ಗಳ ನೋಟದಿ ಉಕ್ಕುವುದು
ಶಿವನನು ನೋಡಲು ನಾಚುವುದು
ಮನವದು ಅವನಲಿ ಸೇರುವುದು ...2

ಅರುಣದ ಕಾಂತಿಯು ತನುವಲ್ಲಿ
ಅಳಿಯದ ತೇಜವು ಬಲದಲ್ಲಿ
ಬೆಳಗುವ ಸೋಮನು ಶಿರದಲ್ಲಿ
ಚಂದ್ರಾರ್ಕರು ನಿಂತಿಹರಲ್ಲಿ ...3

ಅಕ್ಕರೆ ಶಿವತಾಂಡವದಲ್ಲಿ
ಅಚ್ಚರಿ ಪ್ರಮಥ ಗಣಗಳಲಿ
ಅರಿಯದೆ ಪುಳಕವು ತನುವಲ್ಲಿ
ಅದುರಿದ ಪರಶಿವ ಭ್ರಮೆಯಲ್ಲಿ ...4

ಸಾಸಿರ ಪದುಮದಿ ಬೆಳಗುವನು
ಬಯಸುತ ಶಿಖರದ ಬಿಂದುವನು
ವೇದಾಂತ ಮಾರ್ಗದಿ ನಡೆಯುವನು
ಸಚಿದಾನಂದದಿ ಮೆರಯುವನು ...5